I

# ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ
# SDS TRC & RAJIV GANDHI INSTITUTE OF CHEST DISEASES

(As Autonomous Institute, Government of Karnataka)
Reg. No. : SOR/BLU/DR/671/09-10 dated 23-09-2009
(Superspeciality Referral Hospital & Post Graduate Institute)

ಸಂಖ್ಯೆ: ಎಸ್‌ಡಿಎಸ್/ನೇಮಕಾತಿ/01/ ತಜ್ಞರು/2021-22/03 ದಿನಾಂಕ:29.03.2023

**ಅಧಿಕೃತ ಜ್ಞಾಪನಾ ಪತ್ರ**

ವಿಷಯ: ಎಸ್‌ಡಿಎಸ್ ಕ್ಷಯರೋಗ ಸಂಶೋಧನಾ ಕೇಂದ್ರ ಮತ್ತು ರಾಜೀವ್‌ಗಾಂದಿ ಎದೆರೋಗಗಳ ಸಂಸ್ಥೆ, ಬೆಂಗಳೂರು ಇಲ್ಲಿ ತಜ್ಞರ ಹುದ್ದೆಗೆ ನೇಮಕಾತಿ ಮಾಡಿರುವ ಕುರಿತು.

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ: ಎಸ್‌ಡಿಎಸ್/ನೇಮಕಾತಿ/01/ತಜ್ಞರು/2021-22,ದಿನಾಂಕ: 23.12.2021.

2 ) ಅಂತಿಮ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಎಸ್‌ಡಿಎಸ್/ನೇಮಕಾತಿ/ 01/ಕ.ಕ/2021-22, ದಿನಾಂಕ: 20/03/2023.

3) ಸರ್ಕಾರದ ಪತ್ರ ಸಂಖ್ಯೆ: ಎಂಇಡಿ 648 ಎಂಎಂಸಿ 2022 ದಿನಾಂಕ:18-03-2023.

4) ಸರ್ಕಾರದ ಪತ್ರ ಸಂಖ್ಯೆ: ಎಂಇಡಿ 201 ಎಂಎಂಸಿ 2023 ದಿನಾಂಕ: 29-03-2023.

********

ಎಸ್‌ಡಿಎಸ್ ಕ್ಷಯರೋಗ ಸಂಶೋಧನಾ ಕೇಂದ್ರ ಮತ್ತು ಮತ್ತು ರಾಜೀವ್‌ಗಾಂದಿ ಎದೆರೋಗಗಳ ಸಂಸ್ಥೆ, ಬೆಂಗಳೂರು ಇಲ್ಲಿ ತಜ್ಞರ ಹುದ್ದೆಯ ಆಯ್ಕೆಗಾಗಿ ದಿನಾಂಕ:16.06.2022 ರಂದು ನಡೆಸಲಾದ ನೇರ ಸಂದರ್ಶನಕ್ಕೆ (Walk in Interview) ಹಾಜರಾದ ಅಭ್ಯರ್ಥಿಗಳಲ್ಲಿ ಈ ಕೆಳಕಂಡ ವೈದ್ಯರನ್ನು ಅವರು ಹೊದಿರುವ ಸ್ನಾತಕೋತ್ತರ ಪದವಿಯ ಆಧಾರದ ಮೇಲೆ ವೇತನ ಶ್ರೇಣಿ ರೂ. 79800-211500 ರಲ್ಲಿ (ಪರಿಷ್ಕೃತ ಎಐಸಿಟಿ ವೇತನ ಶ್ರೇಣಿ) ಹಾಗೂ ಇತರೆ ಭತ್ಯೆಗಳಲ್ಲಿ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆಗೊಳಪಟ್ಟು ನೇಮಕಾತಿ ಮಾಡಲಾಗಿದೆ.

| ಕ್ರ. ಸಂ. | ಅಂತಿಮ ಆಯ್ಕೆ ಪಟ್ಟಿಯಲ್ಲಿನ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಪದನಾಮ | ವಿಳಾಸ |
|---|---|---|---|---|
| 01. | 02 | ಡಾ. ಅರವಿಂದರಾಮ್.ವಿ.ಆರ್ ಸನ್ ಆಫ್ ರಾಜಣ್ಣ.ವಿ | ಸಹಾಯಕ ಪ್ರಾಧ್ಯಾಪಕರು | |

1. ಈ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977 ರನ್ವಯ ಎರಡು ವರ್ಷಗಳ ಖಾಯಂ ಪೂರ್ವ ಸೇವಾವಧಿಗೆ ಒಳಪಟ್ಟಿರುತ್ತದೆ. ಈ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ನಂತರ ಹುದ್ದೆಯನ್ನು ಖಾಯಂಗೊಳಿಸಲಾಗುವುದು. ಖಾಯಂಪೂರ್ವ ಸೇವಾವಧಿಯಲ್ಲಿ ಸಂಸ್ಥೆಯು ಯಾವುದಾದೂ ತರಬೇತಿಯನ್ನು ನಿಗಧಿಪಡಿಸಿದ್ದಲ್ಲಿ ಅದನ್ನು ಪೂರ್ಣಗೊಳಿಸತಕ್ಕದ್ದು. ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸದಿದ್ದಲ್ಲಿ ಅಥವಾ ನಿಗಧಿತ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡದಿದ್ದಲ್ಲಿ ಅವರನ್ನು ಕೆಲಸದಿಂದ ಬಿಡುಗಡೆ ಮಾಡುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ. ಅಲ್ಲದೆ ಖಾಯಂ ಪೂರ್ವಸೇವಾವಧಿಯಲ್ಲಿ ಯಾವುದೇ ಉನ್ನತ ವ್ಯಾಸಂಗಕ್ಕೆ ನಿಯೋಜನೆ ಮೇಲೆ ತೆರಳಲು ಅರ್ಹರಾಗಿರತಕ್ಕದ್ದಲ್ಲ.
2. ಈ ನೇಮಕಾತಿ ಪತ್ರ ತಲುಪಿದ 15 ದಿನಗಳೊಳಗಾಗಿ ಅಭ್ಯರ್ಥಿಯು ಈ ಸಂಸ್ಥೆಯ ನಿರ್ದೇಶಕರಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 18(3) ರನ್ವಯ ಯಾವುದೇ ಸೂಚನೆಯಿಲ್ಲದೇ ರದ್ದುಪಡಿಸಲಾಗುವುದು.
3. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವಾಗ ಎಲ್ಲಾ ಮೂಲ ದಾಖಲೆಗಳನ್ನು ಅಂದರೆ ಸದರಿ ಹುದ್ದೆಗೆ ನಿಗಧಿಪಡಿಸಿರುವ ವೈದ್ಯಕೀಯ ಪದವಿ/ಸ್ನಾತಕೋತ್ತರ ಪದವಿ ವಿದ್ಯಾರ್ಥಿತೆಯ ಅಂಕಪಟ್ಟಿ, ಕೆಎಂಸಿ

ನೋಂದಣಿ ಪ್ರಮಾಣ ಪತ್ರ, ಜನ್ಮ ದಿನಾಂಕವನ್ನೊಳಗೊಂಡ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲನೆಗಾಗಿ ಹಾಜರುಪಡಿಸತಕ್ಕದ್ದು.

4. ಅಭ್ಯರ್ಥಿಯು ಸಲ್ಲಿಸುವ ಅಂಕಪಟ್ಟಿ ಹಾಗೂ ಇತರೆ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು. ಅಭ್ಯರ್ಥಿಯು ಸಲ್ಲಿಸಿರುವ ಯಾವುದೇ ದಾಖಲೆಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ ಅಂತಹ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಪಡಿಸಲಾಬುದು.
5. ದೈಹಿಕ ಅರ್ಹತಾ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಪಡೆದು ಸಲ್ಲಿಸತಕ್ಕದ್ದು,
6. ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರವನ್ನು ಕರ್ತವ್ಯಕ್ಕೆ ಹಾಜರಾಗುವ ಮುನ್ನ ಹಾಜರುಪಡಿಸಬೇಕಾಗುತ್ತದೆ. ಅಭ್ಯರ್ಥಿಯು ಜೇಷ್ಠತೆಯು ಅಂತಿಮ ಆಯ್ಕೆ ಪಟ್ಟಿಯ ಕ್ರಮಾಂಕದಂತೆ ಇರುತ್ತದೆ.
7. ಆಯಾ ಪ್ರವರ್ಗಗಳಲ್ಲಿ ಮೀಸಲಾತಿ ಪಡೆಯಲು ಅಭ್ಯರ್ಥಿಗಳು ತಮ್ಮ ಜಾತಿ ಮತ್ತು ಆದಾಯದ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು, (ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ಹೊರತುಪಡಿಸಿ).
8. ಈ ನೇಮಕಾತಿ ಆದೇಶವು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯ/ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಹೂಡಲಾಗುವ/ಹೂಡಲಾಗಿರುವ ಪ್ರಕರಣದ ತೀರ್ಪಿನನ್ವಯ ಪುನರ್ ಅವಲೋಕನಕ್ಕೆ ಒಳಪಟ್ಟಿರುತ್ತದೆ.
9. ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಜಾತಿ ಪ್ರಮಾಣ ಪತ್ರ ಅಥವಾ ವಿವಾಹ ಸ್ಥಿತಿಗತಿ ಪ್ರಮಾಣ ಪತ್ರಗಳಲ್ಲಿ ತಪಾಸಣೆಯ ನಂತರ ಸುಳ್ಳೆಂದು ಕಂಡು ಬಂದಲ್ಲಿ ಅವರ ಸೇವೆಯನ್ನು ಯಾವುದೇ ಕಾರಣ ನೀಡದೇ ರದ್ದುಪಡಿಸಲಾಗುವುದು ಮತ್ತು ಅವರ ಮೇಲೆ ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಕ್ಕೆ ಭಾರತೀಯ ದಂಡ ಸಂಹಿತೆಯ ಪ್ರಕಾರ ಕ್ರಮಕೈಗೊಳ್ಳಲಾಗುವುದು.
10. ಇತರೆ ಎಲ್ಲಾ ಸೇವಾ ಷರತ್ತುಗಳು ಈ ಸಂಸ್ಥೆಯ ಬೈಲಾದಲ್ಲಿರುವ ಸೇವಾ ನಿಯಮಗಳಂತೆ ಮತ್ತು ಮುಂದೆ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ನಿಯಮಗಳಿಗೆ ಒಳಗೊಂಡಿರತಕ್ಕದ್ದು.
11. ಅಭ್ಯರ್ಥಿಯ ಜೇಷ್ಠತೆಯ ಅಂತಿಮ ಆಯ್ಕೆಯ ಪಟ್ಟಿಯ ಕ್ರಮಾಂಕದಂತೆ ಇರುತ್ತದೆ.
12. **ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಯ ಕಾರ್ಯ ನಿರ್ವಹಣೆ**

    ನೇಮಕಾತಿ ಹೊಂದಿದ ಅಭ್ಯರ್ಥಿಯ ಸಂಸ್ಥೆ/ಆಸ್ಪತ್ರೆಯ ವೈದ್ಯಕೀಯ ಸೇವೆಗೆ ಸಂಬಂಧಿಸಿದ ಹಾಗೂ ಮೇಲಾಧಿಕಾರಿಗಳು ಸೂಚಿಸುವ ಎಲ್ಲಾ ಕರ್ತವ್ಯಗಳು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು ಹಾಗೂ ವಿದ್ಯಾರ್ಹತೆ ಆಧಾರದ ಮೇಲ ವೃಂದ ಬದಲಾವಣೆಗೆ ಅವಶ್ಯಕತೆಯಿರುವುದಿಲ್ಲ
13. ಅಭ್ಯರ್ಥಿಯು ಈ ಕೆಳಕಂಡ ಲಿಖಿತ ರೂಪದ ಘೋಷಣೆಗಳನ್ನು ಕರ್ತವ್ಯಕ್ಕೆ ಹಾಜರಾಗುವ ಮುನ್ನ ಸಲ್ಲಿಸತಕ್ಕದ್ದು.
    1) ನಾನು ಮದುವೆಯಾಗಿಲ್ಲ/ನಾನು ಮದುವೆಯಾಗಿದ್ದೇನೆ. ಒಬ್ಬರಿಗಿಂತ ಹೆಚ್ಚು ಜೀವಂತ ಪತಿ/ಪತ್ನಿ ಇರುವುದಿಲ್ಲ
    2) ಶ್ರೀಮತಿ/ಶ್ರೀ____________________________________________ಆದ ನಾನು ಪ್ರಾಮಾಣಿಕವಾಗಿ, ಭಾರದ ದೇಶದ ಸಂವಿಧಾನಕ್ಕೆ ಬದ್ಧಳಾ: ನಾಗಿರುತ್ತೇನೆ ಮತ್ತು ನನ್ನ

ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ
SDS TRC & RAJIV GANDHI INSTITUTE OF CHEST DISEASES
(As Autonomous Institute, Government of Karnataka)
Reg. No. : SOR/BLU/DR/671/09-10 dated 23-09-2009
(Superspeciality Referral Hospital & Post Graduate Institute)

ಕರ್ತವ್ಯವನ್ನು ನಿಷ್ಠೆಯಿಂದಲೂ ನಿಸ್ವಾರ್ಥತೆಯಿಂದಲೂ ನಿಷ್ಪಕ್ಷಪಾತವಾಗಿ ನಿರ್ವಹಿಸುತ್ತೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

3) ಶ್ರೀಮತಿ/ಶ್ರೀ______________________________ ಆದ ನಾನು ನನ್ನ ನೇಮಕಾತಿಯು ತಾತ್ಕಾಲಿಕವಾಗಿದ್ದು ಮತ್ತು ಯಾವುದೇ ಸೂಚನೆ/ಕಾರಣಗಳನ್ನು ನೀಡದೇ ಯಾವುದೇ ಸಮಯದಲ್ಲಾದರೂ ಕರ್ತವ್ಯದಿಂದ ವಜಾ ಮಾಡಬಹುದೆಂದು ಖಾತರಿ ಪಡಿಸಿಕೊಂಡು ಈ ನೇಮಕಾತಿಯನ್ನು ಒಪ್ಪಿರುತ್ತೇನೆ.

4) ಶ್ರೀಮತಿ/ಶ್ರೀ____________________________________ಆದ ನಾನು ನನ್ನ ಮೇಲೆ ಪೋಲೀಸ್ ಠಾಣೆಯಲ್ಲಿ ಅಥವಾ ನ್ಯಾಯಾಲಯದಲ್ಲಿ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಾತಿರುವಿಲ್ಲವೆಂದು ಪ್ರಮಾಣೀಕರಿಸುತ್ತೇನೆ ಮತ್ತು ದಾಖಲಾಗಿರುವುದು ಕಂಡು ಬಂದಲ್ಲಿ ಕರ್ತವ್ಯದಿಂದ ವಜಾ ಮಾಡಬಹುದೆಂದು ಖಾತರಿ ಪಡಿಸಿಕೊಂಡು ಈ ನೇಮಕಾತಿಯನ್ನು ಒಪ್ಪಿರುತ್ತೇನೆ.

ನಿರ್ದೇಶಕರು 29/3/23
ಎಸ್‌ಡಿಎಸ್ ಟಿಆರ್‌ಸಿ ಮತ್ತು ಆರ್‌ಜಿಐಸಿಡಿ
ಬೆಂಗಳೂರು
28/3/23 28/3/23

**ಪ್ರತಿಯನ್ನು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ವೈ.ಶಿ), ಬೆಂಗಳೂರು.
2. ಮುಖ್ಯ ಆಡಳಿತಾಧಿಕಾರಿಗಳು, ಎಸ್‌ಡಿಎಸ್ ಟಿಆರ್‌ಸಿ ಮತ್ತು ಆರ್‌ಜಿಐಸಿಡಿ, ಬೆಂಗಳೂರು.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿಆರ್‌ಐ ಅವರಣ, ಬೆಂಗಳೂರು.
4. ಸಹಾಯಕ ಆಡಳಿತಾಧಿಕಾರಿಗಳು ಮತ್ತು ಆಡಳಿತಾ ವಿಭಾಗ
5. ಶುಶ್ರೂಷ ಅಧೀಕ್ಷಕರು ದರ್ಜೆ – 1 (ಪ್ರಭಾರ)
6. ಸಿಬ್ಬಂದಿ (1) ಮತ್ತು (2) ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಅಭ್ಯರ್ಥಿಯಿಂದ ಮೇಲ್ಕಂಡಂತೆ ಲಿಖಿತ ಹೇಳಿಕೆಯನ್ನು ಪಡೆದು ದೃಢೀಕರಿಸಿ ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು.
7. ಲೆಕ್ಕ ಪತ್ರ ವಿಭಾಗ
8. ಕಛೇರಿ ಪ್ರತಿ

ಸೋಮೇಶ್ವರನಗರ 1ನೇ ಮುಖ್ಯರಸ್ತೆ, ಧರ್ಮರಾಮ್ ಕಾಲೇಜು ಅಂಚೆ (ನಿಮ್ಹಾನ್ಸ್ ಹತ್ತಿರ), ಬೆಂಗಳೂರು – 560 029.
Someshwaranagara 1st Main Road, Dharmaram College Post (Near NIMHANS), Bengaluru - 560 029.
Phone : Reception 080-26088500 /501, Director Office 080-26088669
email:sdstbrgicd@gmail.com, director.rgicd@gmail.com Website : www.rgicd.karnataka.gov.in